Geetha Shishu Shikshana Sangha (R)

**SIMHA SUBBAMAHALAKSHMI FIRST GRADE COLLEGE**

**KRS ROAD, MYSURU-570 016**

# ಯಶಸ್

# YASHAS

**Volume – 1 Issue No. – 2** **8th June 2019**

A SSFGC weekly news letter

## Founders' Day observed in SS First Grade College



SS First Grade College an offshoot of GSSS Group of Institutions observed its Founders Day on June 1st 2019.

The Program was held to observe the Birthday of its Founding Secretary of Prof. B. S. Pandit.

Re collecting on the historic growth and development of the institution and the visionary leadership of Prof. Pandit, Smt. Vanaja B Pandit and the Present Secretary, offered floral tribute to his portrait.



Sri. R. K. Bharat, CEO, Dr. K.V. Prabhakara, Director- Academics, Sri. Nataraja-Member, Staff and other members were present. College Principal Smt. R. Gunavathi welcomed.

The first issue of the college Newsletter 'YASHAS' was released and Saplings were planted in the campus to commemorate the occasion.

## ಸಂಸ್ಥಾಪಕರ ದಿನಾಚರಣೆ



ಜಿಎಸ್ಎಸ್ಎಸ್‌ನ ಅಂಗ ಸಂಸ್ಥೆಯಾದ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇದೇ ಜೂನ್ 01, 2019 ರಂದು ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು. ಸಂಸ್ಥೆಯ ಸ್ಥಾಪಕ ಕಾರ್ಯದರ್ಶಿಗಳಾದ ಪ್ರೊ. ಬಿ. ಎಸ್. ಪಂಡಿತ್ ಅವರ ಜನ್ಮ

ದಿನಾಚರಣೆಯ ಭಾಗವಾಗಿ ನಡೆದ ಈ ಕಾರ್ಯಕ್ರಮದಲ್ಲಿ ಈಗಿನ ಕಾರ್ಯದರ್ಶಿಗಳಾದ ಶ್ರೀಮತಿ ವನಜಾ ಬಿ. ಪಂಡಿತ್ ಅವರು ಸಂಸ್ಥೆಯು ನಡೆದು ಬಂದ ದಾರಿಯನ್ನು ಸ್ಮರಿಸಿಕೊಂಡು ಪ್ರೊ. ಬಿ. ಎಸ್. ಪಂಡಿತ್ ಅವರ ಕಾರ್ಯವೈಖರಿ, ಸಂಸ್ಥೆಯ ನಿರ್ಮಾಣದಲ್ಲಿ ಅವರಿಗಿದ್ದ ಬದ್ಧತೆಯನ್ನು ವಿವರಗಳೊಂದಿಗೆ ತಿಳಿಸಿಕೊಟ್ಟರು. ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಆರ್. ಕೆ. ಭರತ್, ಕಾಲೇಜಿನ ನಿರ್ದೇಶಕರಾದ ಡಾ. ಕೆ. ವಿ. ಪ್ರಭಾಕರ, ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ನಟರಾಜ್ ಮತ್ತು ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಪ್ರಾಂಶುಪಾಲರಾದ ಶ್ರೀಮತಿ ಗುಣವತಿ ಸ್ವಾಗತಿಸಿದರು.

ಕಾರ್ಯಕ್ರಮದ ಅಂಗವಾಗಿ ಕಾಲೇಜಿನ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು. ನಂತರ ಕಾಲೇಜಿನ ವತಿಯಿಂದ ವಾರದ ವಾರ್ತಾ ಪತ್ರ 'ಯಶಸ್' ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು.

## Teachers' Orientation Programme

The Orientation Programme for teachers was held on 6th June 2019 at the SSFGC Campus at 11.00 am. The programme began with the welcome address by the principal Smt. Gunavathi. R followed by a talk on the history of the institution, policy matters and rules and regulations of the college by the Chief Administrative Officer Smt. Anupama Pandit.




In her speech the AO spoke about the history of Geetha Shishu Shikshana Sangha, how it was started with a batch of just 8 girls to impart the essence of Bhagavad Gita. Later on it evolved into a school, college and finally an engineering college solely for women. GSSS evolved as a result of the promise made by Prof. B S Pandit to his mother Smt. Rukmini bai Pandit. Today it is one of the premier Institutions of Mysuru mainly due to the collective efforts of the honorary Secretary Smt. Vanaja B Pandit, Smt. Anupama Pandit and the Chief Executive Officer Shri. R. K. Bharath. She concluded her speech by listing the rules and regulations of the institution.

The Director in his speech spoke about the stake holders of the institution, the parents, students and the society. "A Teacher's role is to provide the society with good citizens", he said. He concluded his speech after explaining the three aspects of teaching like additional responsibility, Participative mode and giving the best. He also gave a new interpretation to the name GSSS- where 'S' stands for positivity in everything we are.

Honorary Founder Secretary Smt. Vanaja B Pandit spoke on the Occasion reminiscing about the growth of the institution; all the sacrifices and the hardships the founders had faced to

develop the institution to its present stature. The meeting concluded with the vote of thanks by the Principal Smt. R Gunavathi.

## ಶಿಸ್ತು, ನೈತಿಕ ಬದ್ಧತೆಯಿಂದ ಮೌಲ್ಯಯುತವಾದ ಶಿಕ್ಷಣವನ್ನು ನೀಡುವುದು ಪ್ರಾಧ್ಯಾಪಕರ ಜವಾಬ್ದಾರಿಯಾಗಿರುತ್ತದೆ

**– ಶ್ರೀಮತಿ ಅನುಪಮ ಬಿ. ಪಂಡಿತ್**

ದಿನಾಂಕ 06 ಜೂನ್ 2019 ರಂದು ಮೈಸೂರು ಕೆ.ಆರ್.ಎಸ್ ರಸ್ತೆಯಲ್ಲಿರುವ ಜಿಎಸ್‌ಎಸ್‌ಎಸ್ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ 'ಟೀಚರ್ ಓರಿಯಂಟೇಶನ್' ಕಾರ್ಯಕ್ರಮದಲ್ಲಿ ಜಿಎಸ್‌ಎಸ್‌ಎಸ್‌ನ ಆಡಳಿತಾಧಿಕಾರಿಗಳಾದ ಶ್ರೀಮತಿ ಅನುಪಮ ಬಿ. ಪಂಡಿತ್ ಅವರು ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಉದ್ದೇಶಿಸಿ ಮಾತನಾಡುತ್ತಾ "ಶಿಸ್ತು, ನೈತಿಕ ಬದ್ಧತೆಯಿಂದ ಮೌಲ್ಯಯುತವಾದ ಶಿಕ್ಷಣವನ್ನು ನೀಡುವುದೇ ನಮ್ಮ ಸಂಸ್ಥೆ ಉದ್ದೇಶ. ಮೌಲ್ಯಯುತವಾದ ಶಿಕ್ಷಣದೊಂದಿಗೆ ಸಮಾಜವನ್ನು ಕಟ್ಟುವ ಜವಾಬ್ದಾರಿ ವಿದ್ಯಾರ್ಥಿ ಮತ್ತು ಪ್ರಾಧ್ಯಾಪಕರದ್ದಾಗಿರುತ್ತದೆ. ಈ ನಿಟ್ಟಿನಲ್ಲಿ ಕಾಲೇಜಿನ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಜವಾಬ್ದಾರಿಗಳನ್ನು ನಿರ್ವಹಿಸಿ" ಎಂದು ತಿಳಿಸಿದರು. ಇದರ ಜೊತೆಗೆ ಜಿಎಸ್‌ಎಸ್‌ಎಸ್ ಸಂಸ್ಥೆಯು ಸ್ಥಾಪನೆಯಾದ ಹಿನ್ನೆಲೆ, ಅದರ ಸಂಸ್ಥಾಪಕರಾದ ಪ್ರೊ. ಬಿ. ಎಸ್. ಪಂಡಿತ್ ಅವರ ಪರಿಚಯವನ್ನು ಸಂಕ್ಷಿಪ್ತವಾಗಿ ಮಾಡಿಕೊಟ್ಟರು. ನಂತರದಲ್ಲಿ ಕಾಲೇಜಿನಲ್ಲಿರುವ ಸಿಬ್ಬಂದಿಗಳ ಜವಾಬ್ದಾರಿಗಳನ್ನು ಮತ್ತು ಕಾಲೇಜಿನ ಆಡಳಿತ ಮಂಡಳಿಯ ನಿಯಾಮವಳಿಗಳನ್ನು ತಿಳಿಸಿಕೊಟ್ಟು ಉತ್ತಮವಾದ ಮೌಲ್ಯಯುತ ಶಿಕ್ಷಣ ನೀಡುವಲ್ಲಿ ಸಿಬ್ಬಂದಿಗಳ ಸಹಕಾರವನ್ನು ಈ ಸಂದರ್ಭದಲ್ಲಿ ನೆನೆದರು.




ಜಿಎಸ್‌ಎಸ್‌ಎಸ್‌ನ ಕಾರ್ಯದರ್ಶಿಗಳಾದ ಶ್ರೀಮತಿ ವನಜಾ ಬಿ. ಪಂಡಿತ್ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಜಿಎಸ್‌ಎಸ್‌ಎಸ್ ಶಿಕ್ಷಣ ಸಂಸ್ಥೆಯ ಸ್ಥಾಪನೆಯ ಉದ್ದೇಶವನ್ನು ಮತ್ತೊಮ್ಮೆ ಎಲ್ಲರಿಗೂ ಮನವರಿಕೆ ಮಾಡಿಕೊಡುತ್ತಾ, ಸಂಸ್ಥೆಯ ಸಂಸ್ಥಾಪಕರಾದ ಪ್ರೊ. ಬಿ. ಎಸ್. ಪಂಡಿತ್ ಅವರ ಸಾಮಾಜಿಕ ಕಾಳಜಿ ಮತ್ತು ಈ ಶಿಕ್ಷಣ ಸಂಸ್ಥೆಯ ಹಿಂದೆ ಇದ್ದ ಅವರ ತ್ಯಾಗಮಯ ಜೀವನವನ್ನು ನೆನೆಯುತ್ತಾ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಮನವರಿಕೆ ಮಾಡಿಕೊಟ್ಟರು.



ಜಿಎಸ್‌ಎಸ್‌ಎಸ್ ಸಿಂಹ ಸುಬ್ಬಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನ ನಿರ್ದೇಶಕರಾದ ಡಾ. ಪ್ರಭಾಕರ. ಕೆ. ವಿ ಅವರು ಸಿಬ್ಬಂದಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, "ಪ್ರಾಧ್ಯಾಪಕರು ಶೈಕ್ಷಣಿಕವಾಗಿ ಬರುವ ಸವಾಲುಗಳನ್ನು ಎದುರಿಸುವ ಮನೋಭಾವವನ್ನು ಬೆಳಸಿಕೊಳ್ಳಿ. ಸವಾಲುಗಳನ್ನು ಎದುರಿಸಿದಷ್ಟು ಮನುಷ್ಯನ ಶಕ್ತಿ ಇಮ್ಮಡಿಗೊಳ್ಳುತ್ತಿರುತ್ತದೆ. ಶೈಕ್ಷಣಿಕವಾಗಿ ಮತ್ತು ಆಡಳಿತಾತ್ಮಕವಾಗಿ ಪ್ರಾಧ್ಯಾಪಕರು ಮತ್ತು ಕಾಲೇಜು ಒಟ್ಟೊಟ್ಟಿಗೆ ಬೆಳೆಯಬೇಕು. ಅದಕ್ಕೆ ಪೂರಕವಾದ ಪ್ರಮುಖವಾದ

ನಾಲ್ಕು ಅಂಶಗಳನ್ನು ಗಮನಿಸಿ ಅನುಸರಿಸಿ ಎಂದರು. ಮೊದಲನೆಯದಾಗಿ ಬೋಧನೆಯ ಜೊತೆಗೆ ಹೆಚ್ಚುವರಿ ಜವಾಬ್ದಾರಿಯನ್ನು ಸ್ವೀಕರಿಸಿ ನಿರ್ವಹಿಸುವ ಕೌಶಲ್ಯವನ್ನು ಬೆಳಸಿಕೊಳ್ಳಿ. ಎರಡನೆಯದಾಗಿ ಹೆಚ್ಚುವರಿ ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ಹೆಚ್ಚು ಹೆಚ್ಚು ಅವಕಾಶಗಳನ್ನು ನಿರ್ಮಿಸಿಕೊಳ್ಳುವ ಮನಸ್ಥಿತಿ ಇರಲಿ. ಮೂರನೆಯದಾಗಿ ಎಲ್ಲಾ ಕೆಲಸಕಾರ್ಯಗಳಲ್ಲಿಯೂ ಭಾಗವಹಿಸುವ ಮನೋಧರ್ಮವನ್ನು ರೂಪಿಸಿಕೊಳ್ಳಿ. ನಾಲ್ಕನೆಯದಾಗಿ ವೃತ್ತಿ ಬದುಕಿನಲ್ಲಿ ಸಹೋದ್ಯೋಗಿಗಳನ್ನು ಪರಸ್ಪರ ಗೌರವಿಸುವ ಮನೋಧರ್ಮ ನಮ್ಮಲ್ಲಿ ಇರಲಿ", ಆ ಮೂಲಕ ಸುಂದರವಾದ ವೃತ್ತಿಬದುಕನ್ನು ಕಟ್ಟಿಕೊಳ್ಳೋಣ ಎಂದು ಆಶಿಸಿ ಶುಭಕೋರಿದರು.



ನಂತರ ಆಡಳಿತ ಮಂಡಳಿಯವರು ಕಾಲೇಜಿನ ಸಿಬ್ಬಂದಿಗಳೊಂದಿಗೆ ಮುಕ್ತ ಸಂವಾದದಲ್ಲಿ ತೊಡಗಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಗುಣವತಿಯವರು ಎಲ್ಲರನ್ನು ಸ್ವಾಗತಿಸಿದರು. ಕಾರ್ಯಕ್ರಮವನ್ನು ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಪೂರ್ಣಿಮ ಅವರು ನಿರೂಪಿಸಿದರು.

***

**ಕನ್ನಡ ವರದಿಗಾರರು**

ಡಾ. ಬಿ. ಎಸ್. ಸುದೀಪ್, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ

**ಇಂಗ್ಲಿಷ್ ವರದಿಗಾರರು**

ಶ್ರೀಮತಿ ಪೂರ್ಣಿಮ. ಕೆ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ

**ಛಾಯಾಚಿತ್ರ ಕೃಪೆ**

ಡಾ. ಬಿ. ಎಸ್. ಸುದೀಪ್, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ